**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ.254/2022</u>**

**<u>ಪಿರ್ಯಾಧಿದಾರರುಃ</u>** ಶ್ರೀ ಜಿ. ತಿಮ್ಮಪ್ಪ ಬಿನ್ ಗಣೇಶ್, ಸುಮಾರು 59 ವರ್ಷ, ವಾಸ ಕರ್ಕೇಶ್ವರ ಗ್ರಾಮ, ಬಾಳೆಹೊನ್ನೂರು ಹೋಬಳಿ, ನರಸಿಂಹರಾಜಪುರ ತಾಲ್ಲೂಕು.

**-ವಿರುದ್ಧ -**

**<u>ಆರೋಪಿಃ</u>** ಶ್ರೀ ಹೆಚ್.ಎಮ್. ಸತೀಶ ಬಿನ್ ಕೆ.ಸಿ. ಮಂಜಪ್ಪಗೌಡ, ವಯಸ್ಸು ಸುಮಾರು 41 ವರ್ಷ, ವಾಸ ಬಾಳೆಗದ್ದೆ, ನರಸೀಪುರ ಗ್ರಾಮ, ನಾರ್ವೆ ಅಂಚೆ, ಕೊಪ್ಪ ತಾಲ್ಲೂಕು.

**<u>ಆರೋಪಣೆ</u>**

ಆರೋಪಿಯಾದ ನೀವು ಪಿರ್ಯಾಧಿದಾರರಿಂದ ಪಡೆದ ಸಾಲದ ಬಾಬ್ತು ಅವರಿಗೆ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ.752952, ರೂ.65,000/-, ದಿನಾಂಕ 30.03.2022 ನ್ನು ನಮೂದಿಸಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ನಾರ್ವೆ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಕೆನರಾ ಬ್ಯಾಂಕ್, ಕೊಪ್ಪ ಶಾಖೆಗೆ ಹಾಜರುಪಸಿದಾಗ "**Funds Insufficient** "ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 30.04.2022 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 09.05.2022 ರಂದು ನಿಮಗೆ ಜಾರಿಯಾಗಿದ್ದು, ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ **ವಿಚಾರಣೆಯಾಗಬೇಕು.**

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ಸಹಿ/- 09.07.2025.
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ